

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	184
ಉತ್ತರಿಸುವ ದಿನಾಂಕ	16.02.2022
ಉತ್ತರಿಸುವ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನು ಕ್ರಮ	ಪ್ರಶ್ನೆ	ಉತ್ತರ
ಅ	ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಮುಖ್ಯಮಂತ್ರಿಗಳ ಬಹುಮಹಡಿಯ ಬೆಂಗಳೂರು ವಸತಿ ಯೋಜನೆಯನ್ನು ಎಷ್ಟು ಹಂತಗಳಲ್ಲಿ ಪೂರ್ಣಗೊಳಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ; ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಯೋಜನೆಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ; (ವಿವರ ನೀಡುವುದು)	ಮುಖ್ಯ ಮಂತ್ರಿಯವರ "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯನ್ನು ಎರಡು ಹಂತಗಳಲ್ಲಿ ಅಂದರೆ, ಮೊದಲನೇ ಹಂತದಲ್ಲಿ 46,499 (ಜಿ+3 ಯಿಂದ ಎಸ್+14 ರವರೆಗೆ) ಮನೆಗಳು ಹಾಗೂ ಎರಡನೇ ಹಂತದಲ್ಲಿ 53,501 (ಜಿ+3) ಮನೆಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ವತಿಯಿಂದ ನಿರ್ಮಿಸಲು ವಸತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಮೊದಲನೇ ಹಂತದಲ್ಲಿ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 46,499 ಬಹುಮಹಡಿ ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ :-

ವಿಧಾನ ಸಭಾ ಕ್ಷೇತ್ರ	ಮನೆಗಳ ಸಂಖ್ಯೆ
ಕೆ. ಆರ್. ಪುರಂ	684
ಮಹದೇವಪುರ	4,706
ಆನೇಕಲ್	6,258
ಬೆಂಗಳೂರು ದಕ್ಷಿಣ	1,307
ಯಶವಂತಪುರ	17,350
ಬ್ಯಾಟರಾಯನಪುರ	4,007
ಯಲಹಂಕ	11,256
ದಾಸರಹಳ್ಳಿ	931

ಈ ಪೈಕಿ ಸುಮಾರು 3,000 ಬಹುಮಹಡಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಏಪ್ರಿಲ್-2022ರ ಅಂತ್ಯಕ್ಕೆ ಅರ್ಹ ಫಲಾನುಭವಿಗಳಿಗೆ ಹಸ್ತಾಂತರಿಸಲು ಸದರಿ ನಿಗಮದ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿದೆ.

ಆ	ಸದರಿ ಯೋಜನೆಯಡಿ ವಸತಿ ಬಯಸಿ ಇದುವರೆಗೂ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; ಎಷ್ಟು ಫಲಾನುಭವಿಗಳಿಗೆ ವಸತಿಯನ್ನು ಹಂಚಿಕೆ ಮಾಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಸದರಿ ಯೋಜನೆಯಡಿ ಇಲ್ಲಿಯವರೆಗೆ 38,005 ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗಿವೆ. ಇಲ್ಲಿಯವರೆಗೆ 5,045 ಫಲಾನುಭವಿಗಳು ಪ್ರಾರಂಭಿಕ ಠೇವಣಿಯಾಗಿ ತಲಾ ರೂ. 1.00 ಲಕ್ಷದಂತೆ ಮೊತ್ತ ಪಾವತಿಸಿದ್ದು, ಈ ಪೈಕಿ 3,022 ಫಲಾನುಭವಿಗಳು ತಮ್ಮ ಇಚ್ಛೆಯ ಫ್ಲಾಟ್ / ಮನೆಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಫಲಾನುಭವಿಗಳು ಆನ್‌ಲೈನ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಮನೆ / ಫ್ಲಾಟ್‌ಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಇ	ಇಲ್ಲಿಯವರೆಗೆ ಯೋಜನೆಗೆ ಜಾಗ ಮತ್ತು ಮನೆ ನಿರ್ಮಾಣ ಮಾಡಲು ಖರ್ಚು ಮಾಡಿದ ಹಣ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಇಲ್ಲಿಯವರೆಗೆ ಸದರಿ ಯೋಜನೆಗೆ ಕಂದಾಯ ಇಲಾಖೆಯಿಂದ 1167 ಎಕರೆ 24 ಗುಂಟೆ ಜಮೀನನ್ನು ಉಚಿತವಾಗಿ (ಮುಫತ್ತಾಗಿ) ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಮಂಜೂರು ಮಾಡಲಾಗಿದೆ. ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ಜಮೀನನ್ನು ಇದುವರೆಗೆ ಖರೀದಿ ಮಾಡಿರುವುದಿಲ್ಲ ಹಾಗೂ ಪ್ರಸ್ತುತ ಖರೀದಿ ಮಾಡಲು ಉದ್ದೇಶಿಸಿರುವುದಿಲ್ಲ. ಇದರಿಂದಾಗಿ ಸದರಿ ಜಮೀನು ಖರೀದಿಗಾಗಿ ಇಲ್ಲಿಯವರೆಗೆ ಯಾವುದೇ ಮೊತ್ತ (ಹಣ) ವನ್ನು ಖರ್ಚು ಮಾಡಿರುವುದಿಲ್ಲ. ಆದರೆ, ಈ ಯೋಜನೆಯ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ರೂ. 900.06 ಕೋಟಿಗಳ ಮೊತ್ತವನ್ನು ಖರ್ಚು ಮಾಡಲಾಗಿದೆ.

[ಸಂಖ್ಯೆ: ವಇ 23 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.

ಕ್ಷೇತ್ರವಾರು [illegible] ಆನ್‌ಲೈನ್ ಮುಖಾಂತರ [illegible]-
-ಕೊಂಡಿರುವ [illegible] ವಿವರಗಳು.

ಅನುಬಂಧ-1

ಕ್ಷೇತ್ರದ ಹೆಸರು	ಒಟ್ಟು ಸ್ಥಳಗಳಲ್ಲಿ ನಿರ್ಮಾಣ	ಒಟ್ಟು ಬ್ಲಾಕ್ ಸಂಖ್ಯೆ	ಒಟ್ಟು ಫ್ಲಾಟ್‌ಗಳ ಸಂಖ್ಯೆ	ಒಟ್ಟು ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ	ಒಟ್ಟು ಫ್ಲಾಟ್‌ಗಳ ಸಂಖ್ಯೆ ಇತರರಿಗೆ	ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ	ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ	ಒಟ್ಟು ಬುಕ್ ಆಗಿರುವ ಫ್ಲಾಟ್‌ಗಳ ಸಂಖ್ಯೆ ಇತರರಿಗೆ	ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ	ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ ವಿಕಲಚೇತನರಿಗೆ	ಒಟ್ಟು ಲಭ್ಯವಿರುವ ಫ್ಲಾಟ್‌ಗಳ ಸಂಖ್ಯೆ ಇತರರಿಗೆ
ಆನೇಕಲ್	5	16	4044	75	3969	251	7	244	3793	68	3725
ಕೃಷ್ಣರಾಜಪುರಂ	2	4	524	0	524	246	0	246	278	0	278
ದಾಸರಹಳ್ಳಿ	1	1	797	17	780	408	9	399	389	8	381
ಬೆಂಗಳೂರು ದಕ್ಷಿಣ	1	8	483	0	483	224	0	224	259	0	259
ಬ್ಯಾಟರಾಯನಪುರ	1	1	140	0	140	103	0	103	37	0	37
ಮಹದೇವಪುರ	1	9	4199	83	4116	102	5	97	4097	78	4019
ಯಲಹಂಕ	7	41	5268	69	5199	988	16	972	4280	53	4227
ಯಶವಂತಪುರ	8	26	11753	183	11570	700	19	681	11053	164	10889
ಒಟ್ಟು	26	106	27208	427	26781	3022	56	2966	24186	371	23815

[illegible] 14/02/22